

ದೊಡ್ಡ ಅಕ್ಷರಗಳಲ್ಲಿ, ‘ಇಲ್ಲಿ ವಸತಿ ಹಾಗೂ ಬೆಳಗಿನ ಉಪಹಾರದ ವ್ಯವಸ್ಥೆ ಇರುತ್ತದೆ.’ ಎಂದು ಬರೆದಿರುವುದು ಅವನ ಸೂಕ್ಷ್ಮ ದೃಷ್ಟಿಗೆ ಕಾಣಿಸಿತು.

ಅವನು ಅಲ್ಲೇ ನಿಂತ. ಸ್ವಲ್ಪ ಹೊತ್ತು ಆ ಮನೆಯನ್ನೇ ಗಮನಿಸುತ್ತಾ ಇನ್ನೂ ಹತ್ತಿರಕ್ಕೆ ಸರಿದ. ಕಿಟಕಿಯ ಮೇಲೆ ಹಸಿರು ವೆಲ್ವೆಟಿನ ಪರದೆ ಇಳಿಸಲಾಗಿತ್ತು. ಕಿಟಕಿಯ ಬದಿಯಲ್ಲಿ ಯಾವುದೋ ಬಳ್ಳಿ ಮೇಲಕ್ಕೆ ಹತ್ತುತ್ತಿತ್ತು. ಅವನು ಮೆಟ್ಟಿಲುಗಳನ್ನೇರಿ ಪರದೆ ಮುಚ್ಚಿರದ ಕಿಟಕಿಯ ಸಂದಿನಿಂದ ಒಳಗೆ ಇಣುಕಿದ. ಅದು ನಡುಕೋಣೆ ಇದ್ದಿರಬೇಕು. ಬೆಂಕಿಗೂಡಿನಲ್ಲಿ ಧಗಧಗ ಬೆಂಕಿ ಉರಿಯುತ್ತಲಿತ್ತು.